



ನಕ್ಕುಬಿಡಿ

## ತಿಂಡಿ ಆಯ್ತು

ಹುಡುಗ: ಹಾಯ್
ಹುಡುಗಿ: ಹಲೋ
ಹುಡುಗ: ಹೇಗಿದ್ದೀಯಾ?
ಹುಡುಗಿ: ಚೆನ್ನಾಗಿದ್ದೀನಿ.
ಹುಡುಗ: ತಿಂಡಿ ಆಯ್ತಾ?
ಹುಡುಗಿ: ಇಂಥ ಸಿಲ್ಲಿ ಪ್ರಶ್ನೆ ಯಾಕ್ ಕೇಳ್ತಿಯೋ?
ಹುಡುಗ: ಹಾಗಾದರೆ ಹೇಳು ಭಾರತೀಯ ಆರ್ಥಿಕ ನೀತಿಯ ಸಬಲೀಕರಣ ಮತ್ತು ಗಡಿ ರಕ್ಷಣಾ ಹಾಗೂ ರೇಲ್ವೆ ಇಲಾಖೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಬಗ್ಗೆ ನಿನ್ನ ಅಭಿಪ್ರಾಯವೇನು?
ಹುಡುಗಿ: ಈಗಷ್ಟೆ ತಿಂಡಿ ಆಯ್ತು ಕಣೋ, ಇಡ್ಲಿ, ಸಾಂಬಾರ್ ಅಮ್ಮ ಮಾಡಿದ್ದು.

★★★

## ಅಷ್ಟೂ ಗೊತ್ತಿಲ್ಲ

ಮಗ: ಅಮ್ಮಾ ಪಕ್ಕದ ಮನೆ ಆಂಟಿ ಹೆಸರೇನಮ್ಮ?
ಅಮ್ಮ: ಲತಾ ಕಣೋ ಯಾಕೆ?
ಮಗ: ಅಯ್ಯೋ ಅಪ್ಪನಿಗೆ ಗೊತ್ತೇ ಇಲ್ಲ ಆಂಟಿಯನ್ನು ಬಂಗಾರಿ ಎಂದು ಕರೀತಾರೆ ಅಷ್ಟೂ ಗೊತ್ತಿಲ್ಲ.

★★★

## ಪಾಯಸ ಮಾಡ್ತೀನಿ

ಹೆಂಡತಿ: ಈ ಬಾರಿಯೂ ನನ್ನ ಬರ್ತ್ ಡೇ ಮರೆತು ಹೋದ್ರಿ ನೀವು.
ಗಂಡ: ಏನ್ಮಾಡ್ಲಿ ಕಣೆ ನಿನ್ನ ಮುಖ ನೋಡ್ತಾ ಇದ್ರೆ ನಿನ್ನ ವಯಸ್ಸು ಹೆಚ್ಚಾಗ್ತಾ ಇದೆ ಎಂದು ಅನ್ಸೋದೇ ಇಲ್ಲ
ಹೆಂಡತಿ: ಹೌದೇನ್ರಿ. ತಡೀರಿ ನಿಮಗಿಷ್ಟವಾದ ಶಾವಿಗೆ ಪಾಯಸ ಮಾಡ್ತೀನಿ.

★★★

## ಸರಿಯಾಗಿ ಹಿಂಡಿದೆ

ಯುವಕ: ಏನ್ ರಾಯ್ರೆ ಯಾಕೆ ಒಂಥರಾ ಇದ್ದೀರಾ?
ರಾಯರು: ಯಾಕೂ ಇಲ್ಲಪ್ಪ. ನಮ್ಮನೇಲಿ ಬೆಕ್ಕು ಇತ್ತಲ್ಲ ಅದು ಸತ್ತೋಯ್ತು
ಯುವಕ: ಅಯ್ಯೋ ಪಾಪ ಏನಾಗಿತ್ತು ರಾಯ್ರೆ?
ರಾಯರು: ಏನಿಲ್ಲಪ್ಪ ಸ್ನಾನ ಮಾಡಿಸಿದೆ ನಡುಗ್ತಾ ಇತ್ತು, ಬೇಗ ಒಣಗಲಿ ಅಂತ ಸರಿಯಾಗಿ ಹಿಂಡಿದೆ ಅಷ್ಟೆ!



★★★

## ನೂರು ಸಲ

ಸಿಗ್ನಲ್ ಜಂಪ್ ಮಾಡಿದ ನಿವೃತ್ತ ಶಿಕ್ಷಕಿಯನ್ನು ಟ್ರಾಫಿಕ್ ಪೋಲೀಸ್ ಹಿಡಿದು ನಿಲ್ಲಿಸಿದ.
ಟೀಚರ್: ಸೋಂಪಣ್ಣ, ನಾನು ನಿನ್ನ ಟೀಚರ್ ಆಗಿದ್ದೆ. ನನ್ನನ್ನು ಬಿಟ್ಟು ಬಿಡೋ!
ಪೊಲೀಸ್: ಸರಿ ಟೀಚರ್ ಇನ್ನು ಮುಂದೆ ಸಿಗ್ನಲ್ ಜಂಪ್ ಮಾಡಲ್ಲ ಅಂತ ನೂರು ಸಲ ಬರೆದು ಕೊಡಿ. ಆ ಮೇಲೆ ನಿಮ್ಮನ್ನು ಬಿಡುತ್ತೇನೆ.

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ**



